ಎಂ ವಿ ಸಿ ಸಂಖ್ಯೆ 646/2024
ಪಿ ಡಬ್ಲ್ಯೂ-1

**(ದಿನಾಂಕ 22.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ವಿ ಜಿ ಪಿ ವಕೀಲರಿಂದಃ-**

ನಾನು ಕೂಡ್ಲಿಗಿ ಯಿಂದ ಕೊಟ್ಟೂರಿಗೆ ಹೊರಟಿದ್ದೆ. ಬೇಕರಿಗೆ ಸ್ವೀಟ್ ಕೊಟ್ಟು ಗ್ರಾಮಕ್ಕೆ ಮರಳಿ ಓಮಿನಿಯಲ್ಲಿ ಹೋಗುತ್ತಿದ್ದೆ. 3 ವರ್ಷ ದಿಂದ ನಾನು ಸ್ವೀಟ್ ಮಾರಾಟ ಮಾಡುತ್ತಿದ್ದೇನೆ. ವಾಹನ ಚಲಾಯಿಸಲು ನನಗೆ ಡಿ ಎಲ್ ಇರುತ್ತದೆ. ಡಿ ಎಲ್ ಪ್ರತಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲಾ. ನನ್ನ ಓಮಿನಿಯ ಸಂಖ್ಯೆ 2262 ಇರುತ್ತದೆ. ಬಸ್ಸನವರು ಬಲಭಾಗ ದಿಂದ ಬಂದು ಡಿಕ್ಕಿ ಪಡಿಸಿರುವ ಕಾರಣ ಅಪಘಾತ ಆಗಿರುತ್ತದೆ. ನನ್ನ ನಿರ್ಲಕ್ಷತನ ದಿಂದ ನಾನೇ ಬಸ್ಸಿಗೆ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಓಮಿನಿ ಚಲಾಯಿಸಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಓಮಿನಿಯ ಮಾಲೀಕ ವತ್ತು ವಿಮಾದಾರರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲಾ ಎಂದರೆ ಸರಿ. ನನ್ನ ತಪ್ಪಿನಿಂದ ಅಪಘಾತ ಆಗಿರುವ ಕಾರಣ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರಲ್ಲಾ ಎಂದರೆ ಸರಿಯಲ್ಲ. ನಾನು ಚಿಕಿತ್ಸೆ ಗೆ 2 ಲಕ್ಷ ರೂ ಗಿಂತ ಹೆಚ್ಚು ಖರ್ಚು ಮಾಡಿರುತ್ತೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ದಿಂದ ನನಗೆ ತೀವ್ರ ಗಾಯ ಆಗಿರುವುದಿಲ್ಲಾ ಎಂದರೆ ಸರಿಯಲ್ಲ. ತೀವ್ರ ಗಾಯ ಆಗಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ನಾನು ಮೊದಲಿನಂತೆ ನಾನು ಕೆಲಸ ಮಾಡಿಕೊಂಡು ಹೋಗುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತಿಂಗಳಿಗೆ 30 ಸಾವಿರ ರೂ ದುಡಿಯುತ್ತಿದ್ದೆ ಅಂತಾ ತೋರಿಸಲು ದಾಖಲೆ ಕೊಟ್ಟಿರುವುದಿಲ್ಲಾ. ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. 10 ಲಕ್ಷ ರೂ ಗಳನ್ನು ಪರಿಹಾರ ಪಡೆಯಲು ನನಗೆ ಅರ್ಹತೆ ಇಲ್ಲಾ ಎಂದರೆ ಸರಿಯಲ್ಲ. ಅಪಘಾತವು ನನ್ನ ನಿರ್ಲಕ್ಷತನ ದಿಂದ ಅಪಘಾತ

ಆಗಿದೆ ಬಸ್ಸ ಚಾಲಕನಿಂದ ಅಲ್ಲಾ ಎಂದರೆ ಸರಿಯಲ್ಲ. ನನ್ನ ನಿರ್ಲಕ್ಷತನ ದಿಂದ ಅಪಘಾತ ಆಗಿರುವ ಕಾರಣ ಪರಿಹಾರ ಪಡೆಯಲು ಅರ್ಹತೆ ಇಲ್ಲಾ ಎಂದರೆ ಸರಿಯಲ್ಲ. ಪೋಲೀಸರ ಮೇಲೆ ಪ್ರಭಾವ ಬೀರಿ ಸುಳ್ಳು ದಾಖಲೆ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವೈದ್ಯಕೀಯ ದಾಖಲೆಗಳು ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ. ಕಾನೂನು ಬಾಹೀರವಾಗಿ ಪರಿಹಾರ ಪಡೆಯಲು ಸುಳ್ಳು ದಾಖಲೆಯನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.